ವಾದಿಯರು ಈ ದಾವೆಯನ್ನು ಖಾಯಂ ಮನಾಯಿ ಆದೇಶ ಕೋರಿ ಸಲ್ಲಿಸಿರುತ್ತಾರೆ.

ವಾದಿಯರು ಆನುವಂಶಿಕವಾಗಿ ಮೀನುಗಾರಿಕೆ ಕಸಬನ್ನು ಮಾಡಿಕೊಂಡಿದ್ದು ಬೆಟ್ಕುಳಿ ಬರ್ಗಿ ಗಜನಿಗೆ ಸರ್ಕಾರದವರು ಹೊಸದಾಗಿ ಕಾರ್ಲೆಂಡ ಕಟ್ಟು ಕಟ್ಟಿ ಜಂತ್ರಡಿಯ ಪಕ್ಕದಲ್ಲಿ ನದಿಯಲ್ಲಿ ಸ್ವತಂತ್ರವಾಗಿ ಸುರಳಿತವಾಗಿ ಹಾಗೂ ಬಹಿರಂಗವಾಗಿ ಹೊಳೆಗೆ ಅಡ್ಡಲಾಗಿ ಗುಟ್ಟಗಳನ್ನು ಹುಗಿದುಕೊಂಡು ದೋಣಿ ಸಾಗಾಟ ಮಾಡುವವರಿಗೆ ಯಾವುದೇ ರೀತಿಯ ತೊಂದರೆಯಾಗದ ರೀತಿ ಯಲ್ಲಿ ಬೆಲಗುಗಳನ್ನು ಕಟ್ಟಿಕೊಂಡು ಮೀನು ಹಿಡಿಯುತ್ತಾ ತಮ್ಮ ಸಾಂಪ್ರದಾಯಿಕ ರೀತಿಯಲ್ಲಿ ಮೀನುಗಾರಿಕೆ ನಡೆಸಿಕೊಂಡು ಬಂದಿರುತ್ತಾರೆ. ತದನಂತರದಲ್ಲಿ ಬಂದರು ಇಲಾಖೆಯವರು ನದಿಪಾತ್ರದಲ್ಲಿ ಮೀನುಗಾರಿಕೆ ನಡೆಸುವವರಿಗೆ ಮೀನುಗಾರಿಕೆ ಕುರಿತು ಪರವಾನಿಗೆ ಪತ್ರವನ್ನು ಕೂಡಾ ನೀಡಿದ್ದು 1992ರಲ್ಲಿ

ವಾದಿಯ ಸಹೋದರನಾದ ಮೃತ ತಿಪ್ಪು ಗಣಪು ಹರಿಕಂತ್ರ ಪ್ರತಿವಾದಿಯರ ವಿರುದ್ದ ಮೂಲ ದಾವಾ ನಂ.164ಃ92ರಲ್ಲಿ ತಾವು ನದಿಪಾತ್ರದಲ್ಲಿ ಮೀನುಗಾರಿಕೆ ನಡೆಸುವ ಕುರಿತು ತೊಂದರೆ ನೀಡಬಾರದು ಎಂದು ಕೇಳಿ ದಾವೆಯನ್ನು ಹಾಕಿದ್ದು ಆ ದಾವೆಯ ವಾದಿಯು ದಾವೆಯನ್ನು ಮುಂದುವರಿಸದ ಕಾರಣ ತೆಗೆದು ಹಾಕಲ್ಪಟ್ಟಿರುತ್ತದೆ. ವಾದಿಯರು ನದಿಪಾತ್ರದಲ್ಲಿ ಮೀನು ಹಿಡಿಯುವ ಕುರಿತು ಸರ್ಕಾರದವರು ಪರವಾನಿಗೆ ನೀಡಿದ್ದು ಅದೇ ರೀತಿ ಪ್ರತಿವಾದಿ ನಂ. 4 ರಿಂದ 11ನೇದವರಿಗೆ ಕೂಡಾ ಮೀನುಗಾರಿಕೆ ನಡೆಸುವ ಕುರಿತು ಅಧಿಕೃತ ಪರವಾನಿಗೆ ನೀಡಿದ್ದು ಸದ್ರಿ ಪರವಾನಿಗೆ ಅವಧಿ ಅಂತ್ಯಗೊಂಡಿರುತ್ತದೆ. 4ರಿಂದ 11ನೇ ಪ್ರತಿವಾದಿಯರು ಸದ್ರಿ ಸ್ಥಳದಲ್ಲಿ ವಾದಿಯರಿಗೆ ಮೀನುಗಾರಿಕೆ ನಡೆಸಬಾರದು ಎಂಬ ಉದ್ದೇಶದಿಂದ ಅವರಿಗೆ ಅಡ್ಡಿ ಆತಂಕಪಡಿಸುತ್ತಿದ್ದು ವಾದಿಯರು ಸದ್ರಿ ಸ್ಥಳದಲ್ಲಿ ಹಕ್ಕಿನಿಂದ, ರೂಢಿಯಿಂದ ರಿವಾಜಿನಿಂದ ಅನುವಂಶಿಕವಾಗಿ ಮೀನುಗಾರಿಕೆ ನಡೆಯಿಸಿ ಬಂದು ಜೀವನ ಸಾಗಿಸಿ ಬಂದಿದ್ದು ಸದ್ರಿ ಸ್ಥಳದಲ್ಲಿ ವಾದಿಯರಿಗೆ ಮೀನುಗಾರಿಕೆ ನಡೆಸಲು ರೂಡಿಜನ್ಯವಾಗಿ ಹಕ್ಕು ಪಾಪ್ತವಾಗಿದ್ದು ಇದ್ದು, ಪ್ರತಿವಾದಿಯರು ವಾದಿಯರಿಗೆ ಸದ್ರಿ ಸ್ಥಳದಲ್ಲಿ ರೂಡಿಜನ್ಯವಾಗಿ ಪ್ರಾಪ್ತವಾಗಿರುವ ಮೀನುಗಾರಿಕೆ ನಡೆಸುವ ಹಕ್ಕನ್ನು ಮೊಟಕುಗೊಳಿಸುವಂತೆ ಮಾಡಲು ಯಾವುದೇ ಹಕ್ಕು ಇರುವುದಿಲ್ಲ, ಆ ಕಾರಣದಿಂದ ವಾದಿಯರು ಈ ದಾವೆಯನ್ನು ಸಲ್ಲಿಸಿದ್ದು ಅದೇ ರೀತಿ ಮಧ್ಯಂತರ ಅರ್ಜಿ ನಂ.3ನ್ನು ಸಲ್ಲಿಸಿ ಮಧ್ಯಂತರ 3ರಲ್ಲಿ ಪ್ರತಿವಾದಿಯರು ಈ ದಾವೆ ನಿಕಾಲೆಯಾಗುವವರೆಗೆ ವಾದಿಯರು ಮತ್ತು ಅವನ ಕಡೆಯವರು ಅವರ ಪೂರ್ವಜರ ಕಾಲದಿಂದಲೂ ಮೀನುಗಾರಿಕೆ ಕಸಬು ಮಾಡಿಕೊಂಡು ಬಂದಿದ್ದು ಆ ರೀತಿ ಮೀನುಗಾರಿಕೆ ಕಸಬನ್ನು ಮೇಲೆ ಹೇಳಿದ ಸ್ಥಳದಲ್ಲಿ ಮೇಲೆ ಹೇಳಿದ ರೀತಿಯಲ್ಲಿ ಮುಂದುವರಿಸಿಕೊಂಡು ಬರುವಲ್ಲಿ ಯಾವುದೇ ರೀತಿಯ ಅಡ್ಡಿ

ಆತಂಕಪಡಿಸದಂತೆ ಮಧ್ಯಂತರ ಅರ್ಜಿ 3 ರಲ್ಲಿ ಬೇಡಿದಂತೆ ಪ್ರತಿವಾದಿಯರ ವಿರುದ್ದ ಏಕಪಕ್ಷೀಯ ಹಂಗಾಮಿ ತಾಕೀತು ಆದೇಶ ನೀಡಬೇಕೆಂದು ಕೇಳಿಕೊಂಡಿರುತ್ತಾರೆ.

ವಾದಿಯರು ಈ ಹಂತದಲ್ಲಿ ವಾದಿಯ ಸಹೋದರರಾದ ತಿಪ್ಪು ಗಣಪು ಹರಿಕಂತ್ರ ಇವರು ಸಲ್ಲಿಸಿರುವಂತ ಮೂಲ ದಾವಾ ನಂ.162:92ರ ದಾವೆಯ ಆದೇಶ ಪುಟಗಳು, ವಾದಪತ್ರ ಹಾಗೂ ಉದಾಹರಣೆ ಇವುಗಳನ್ನು ಹಾಜರಿಪಡಿಸಿರುತ್ತಾರೆ. ಈ ದಾಖಲೆಗಳನ್ನು ಪರಿಶೀಲಿಸಿದಾಗ ಆ ದಾವೆಯ ವಾದಿಯು ಪ್ರಸ್ತುತ ವಾದಿಯರ ಮತ್ತು ಬಂದರು ಇಲಾಖೆಯವರು ವಿರುದ್ದ ದಾವೆಯನ್ನು ಹೂಡಿದ್ದು ತದನಂತರದಲ್ಲಿ ಈ ದಾವೆಯು ಮುಂದುವರಿಸಲು ಇಚ್ಚಿಸದೇ ಇರುವುದರಿಂದ ಹಿಂತೆಗೆದುಕೊಳ್ಳಲು ಮೆಮೋವನ್ನು ಹಾಕಿರುತ್ತಾರೆ.

ಈ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ವಾದಿಯರು ಪ್ರತಿವಾದಿಯರಿಗೆ 80 ಸಿ.ಪಿ.ಸಿ ಕಲಂ ಅಡಿಯಲ್ಲಿ ನೋಟಿಸನ್ನು ನೀಡಿದ್ದು ನೋಟಿಸು ಜಾರಿಯಾದ ನಂತರ 1 ಮತ್ತು 2ನೇ ಪ್ರತಿವಾದಿಯರು ಅದಕ್ಕೆ ಉತ್ತರವನ್ನು ನೀಡಿದ್ದು ಅದೇ ರೀತಿ 3ನೇ ಪ್ರತಿವಾದಿಯರು ಕೂಡಾ ತನ್ನ ಮರುಜವಾಬನ್ನು ನೀಡಿದ್ದು ತನ್ನ ಜವಾಬಿನಲ್ಲಿ ಮೀನುಗಾರಿಕೆ ಸಹಕಾರಿ ಸಂಘದ ಅಡಿಯಲ್ಲಿ ತಿಪ್ಪು ಗಣಪು ಹರಿಕಂತ್ರ ಇವರಿಗೆ ಪರವಾನಿಗೆಯನ್ನು ನೀಡಿದ್ದು ಆದರ ಹೊರ್ತಾಗಿ ಮೇಲೆ ಹೇಳಿದ ತಿಪ್ಪು ಗಣಪು ಹರಿಕಂತ್ರ ಇವರ ಮಗನಾದ ಮಂಜುನಾಥ ತಿಪ್ಪು ಹರಿಕಂತ್ರ ಇವರಿಗೆ ಮೀನುಗಾರಿಕೆ ನಡೆಸುವ ಬಗ್ಗೆ ಪ್ರಚೋದನೆ ನೀಡುವುದಾಗಿ ತೊಂದರೆ

ಕೊಡುವುದಾಗಿ ಅಥವಾ ಅಡ್ಡಿ ಆತಂಕಪಡಿಸಿದ್ದಾಗಲೀ ಇರುವುದಿಲ್ಲವೆಂದು ಹೇಳಿಕೆ ನೀಡಿರುತ್ತಾರೆ.

ತಮ್ಮ ಜವಾಬಿನಲ್ಲಿ ಈ ದಾವೆಯ ವಾದಿಯರಿಗೆ ಮೇಲೆ ಹೇಳಿದ ಸ್ಥಳದಲ್ಲಿ ಮೀನುಗಾರಿಕೆ ನಡೆಸಲು ಯಾವುದೇ ಅಧಿಕಾರ ಇಲ್ಲವೆಂದಾಗಲೀ ಅಥವಾ ಅವರಿಗೆ ಆ ರೀತಿ ಮೀನುಗಾರಿಕೆ ನಡೆಸುವ ಬಗ್ಗೆ ಪರವಾನಿಗೆ ನೀಡಿಲ್ಲ ಎಂಬ ಬಗ್ಗೆಯಾಗಲೀ ಕಾಣಿಸಿರುವುದಿಲ್ಲ ಮತ್ತು ಅವರು ಅನಧಿಕೃತವಾಗಿ ಆ ಸ್ಥಳದಲ್ಲಿ ಮೀನುಗಾರಿಕೆ ನಡೆಸುತ್ತಿದ್ದರು ಎನ್ನುವ ಬಗ್ಗೆ ಕಾಣಿಸಿರುವುದಿಲ್ಲ. ಆದ್ದರಿಂದ ಮಧ್ಯಂತರ ಅರ್ಜಿ ಸಂಖ್ಯೆ 3 ಹಾಗೂ ಪ್ರಮಾಣಪತ್ರದಲ್ಲಿನ ಅಂಶಗಳು ಇವೆಲ್ಲವುಗಳನ್ನು ನಿರಾಕರಿಸಲು ಯಾವುದೇ ಸಕಾರಣಗಳು ಇಲ್ಲವಾದ್ದರಿಂದ ಮೇಲ್ನೋಟಕ್ಕೆ ವಾದಿಯ ಪರವಾಗಿ ಅನುಕೂಲತೆಯ ಒಲವು ಇರುವುದರಿಂದ ಪ್ರತಿವಾದಿಯ ವಿರುದ್ದ ತಾತ್ಕಾಲಿಕ ನಿರ್ಬಂದಕ ಆಜ್ಞೆ ಆದೇಶ ನೀಡದೆ ಇದ್ದಲ್ಲಿ ವಾದಿಯರಿಗೆ ತುಂಬಾ ನಷ್ಟವಾಗುತ್ತದೆ. ಆದ್ದರಿಂದ ಈ ಕೆಳಗಿನಂತೆಃ

## <u>ಆದೇಶ</u>

ವಾದಿಯರು ಸಿ.ಪಿ.ಸಿ. ಕ್ರಮಾದೇಶ 39 ನಿಯಮ 1ಮತ್ತು 2ರಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 3ನ್ನು ಪುರಸ್ಕಲಾಯಿತು.

ದಾವಾಸ್ತಿಯಲ್ಲಿ ವಾದಿಯರು ವ ಅವರ ಕಡೆಯ ಜನರು, ಅವರ ಪೂರ್ವಜರ ಕಾಲದಿಂದಲೂ ಮೀನುಗಾರಿಕೆ ಕಸಬು

ಮಾಡಿಕೊಂಡು ಬಂದು ಬೆಟ್ಕುಳಿ ಬರ್ಗಿ ಗಜನಿಗೆ ಸರ್ಕಾರದವರು ಹೊಸದಾಗಿ ಕಾರ್ಲೆಂಡ ಕಟ್ಟು ಕಟ್ಟಿ ಜಂತ್ರಡಿಯ ಪಕ್ಕದಲ್ಲಿ ನದಿಯಲ್ಲಿ ಸ್ವತಂತ್ರವಾಗಿ ಸುರಳಿತವಾಗಿ ಹಾಗೂ ಬಹಿರಂಗವಾಗಿ ಹೊಳೆಗೆ ಅಡ್ಡಲಾಗಿ ಗುಟ್ಟಗಳನ್ನು ಹುಗಿದುಕೊಂಡು ದೋಣಿ ಸಾಗಾಟ ಮಾಡುವವರಿಗೆ ಯಾವುದೇ ರೀತಿಯ ತೊಂದರೆಯಾಗದ ರೀತಿಯಲ್ಲಿ ಬೆಲಗುಗಳನ್ನು ಕಟ್ಟಿಕೊಂಡು ಸಾಂಪ್ರದಾಯಿಕವಾಗಿ ಮೀನುಗಾರಿಕೆ ನಡೆಸಿ ಬರುವಲ್ಲಿ ಪ್ರತಿವಾದಿಯರು ಯಾ ಅವರ ಕಡೆಯ ಜನರು ಅಡ್ಡಿ ಆತಂಕಪಡಿಸದಂತೆ ಪ್ರತಿವಾದಿಯರ ವಿರುದ್ದ ಏಕಪಕ್ಷೀಯ ಹಂಗಾಮಿ ತಾಕೀತು ಆದೇಶವನ್ನು ನೀಡಲಾಗಿದೆ. ಈ ಆಜ್ಞೆಯು ಈ ಆದೇಶದ ಮುಂದಿನ ಹುಕ್ಕುಂ ಆಗುವವರೆಗೆ ಜಾರಿಯಲ್ಲಿರುತ್ತದೆ.

ಮಧ್ಯಂತರ ಅರ್ಜಿ ನಂ 3ರ ತುರ್ತು ನೋಟಿಸು ಮತ್ತು ಸಮನ್ಸನ್ನು ವಾದಿಯರು ಪ್ರೊಸೆಸ್ ಫೀ ತುಂಬಿದಲ್ಲಿ ಪ್ರತಿವಾದಿಯರಿಗೆ ಕಳಿಸುವುದು.

ಹಿಂತಿರುಗಿಸುವ ದಿನಾಂಕಃ

ಪ್ರಧಾನ ಸಿವಿಲ್ ನ್ಯಾಯಾಧೀಶರು, ಕುಮಟಾ.